# ಮಾಹಿತಿ ರಕ್ಷಣೆ ಕಾನೂನು ಕುರಿತ ವಿಚಾರ ಸಂಕಿರಣ

**ಬೆಂಗಳೂರು:** ಡಿಜಿಟಲ್ ಸೊಸೈಟಿ ಫೌಂಡೇಷನ್ ಪ್ರತಿ ವರ್ಷದಂತೆ ಈ ಬಾರಿಯೂ ಗಣಕ ಸಮಾಜ ದಿನಾಚರಣೆ ಆಚರಿಸಿತು.

ಗಣಕ ಸಮಾಜದ ದಿನಾಚರಣೆ ಅಂಗವಾಗಿ, ಡಿಜಿಟಲ್ ಸೊಸೈಟಿ ಆಫ್ ಇಂಡಿಯಾ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಹಾಗೂ ಕೆ.ಎಲ್.ಇ. ಕಾನೂನು ಕಾಲೇಜು ಸಹಯೋಗದಲ್ಲಿ 'ಗಣಕ ಸಮಾಜದಲ್ಲಿ ವೈಯಕ್ತಿಕ ಮಾಹಿತಿ ಹಕ್ಕು ಮತ್ತು ಮಾಹಿತಿ ರಕ್ಷಣೆ ಕಾನೂನು' ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಇತ್ತೀಚಿನ ದಿನಗಳಲ್ಲಿ ನಡೆದಿರುವ ಅನೇಕ ಸೈಬರ್ ಅಪರಾಧಗಳ ಪತ್ತೆಯಲ್ಲಿ ಪೊಲೀಸರು ಅಪರಾಧಿಗಳನ್ನು ಕಂಡು ಹಿಡಿಯಲು ಸೈಬರ್ ಜಾಡು ಸಹಾಯ ಮಾಡಿದೆ. ಹಾಗೆಯೇ ಅನೇಕ ವೇಳೆ, ಅಪರಾಧಿಗಳ ಜಾಡು ಮುಚ್ಚಲೂ ಕೂಡ ಸೈಬರ್ ವ್ಯವಹಾರಗಳು ಸಹಾಯ ಮಾಡಿವೆ. ಇಂತಹ ಸಂದರ್ಭಗಳಲ್ಲಿ ಅಪರಾಧಿಗಳು ಮಾಹಿತಿ ಹಕ್ಕನ್ನು ಉಪಯೋಗಿಸಿ ತಪ್ಪಿಸಿಕೊಂಡ ಉದಾಹರಣೆಗಳೂ ಇವೆ ಎಂಬ ವಿಚಾರಗಳು ಸಂಕಿರಣದಲ್ಲಿ ಚರ್ಚೆಯಾದವು.

ಅದೇ ಸಮಯದಲ್ಲಿ ಮಾಹಿತಿ ತಂತ್ರಜ್ಞಾನಕಂಪನಿಗಳು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿನ ನಿರ್ಬಂಧಗಳಿಗೋಸ್ಕರ ಭಾರತದಲ್ಲಿ ಮಾಹಿತಿ ಸಂರಕ್ಷಣಾ ಕಾನೂನು ತರಬೇಕೆಂಬ ಬೇಡಿಕೆಯನ್ನು ಸರಕಾರಕ್ಕೆ ಕೊಟ್ಟಿವೆ. ಈ ಕಾನೂನಿನ ಉದ್ದೇಶ ಪರೋಕ್ಷವಾಗಿ ವೈಯಕ್ತಿಕ ಮಾಹಿತಿ ಹಕ್ಕಿನ ರಕ್ಷಣೆಯೇ ಆಗಿದ್ದರೂ ಅದು ವ್ಯಕ್ತಿ ಕೇಂದ್ರಿತವಾಗದೆ ವ್ಯಾವಹಾರಿಕ ಕೇಂದ್ರಿತವಾಗಿದೆ. ಈಗ ಕೇಂದ್ರ ಸರಕಾರ ವೈಯಕ್ತಿಕ ಮಾಹಿತಿ ಸಂರಕ್ಷಣಾ ಕಾಯಿದೆಯ ಕರಡೊಂದನ್ನು ಸಿದ್ಧಪಡಿಸಿದೆ. ಇದರೊಂದಿಗೆ ಮಾಹಿತಿ ತಂತ್ರಜ್ಞಾನ ಕಾಯಿದೆ 2000 ವನ್ನೂ ಕೂಡ ತಿದ್ದುಪಡಿ ಮಾಡುವ ಬಗ್ಗೆ ಚರ್ಚಿಸಲಾಯಿತು.




**ಡಿಜಿಟಲ್ ಸೊಸೈಟಿ ಫೌಂಡೇಷನ್ ಗಣಕ ಸಮಾಜ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಗಣಕ ಸಮಾಜದಲ್ಲಿ ವೈಯಕ್ತಿಕ ಮಾಹಿತಿ ಹಕ್ಕು ಮತ್ತು ಮಾಹಿತಿ ರಕ್ಷಣೆ ಕಾನೂನು' ಕುರಿತ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಜೆ.ಎಂ. ಮಲ್ಲಿಕಾರ್ಜುನ, ಎಸ್. ಸುರೇಶ್‌ಕುಮಾರ್, ದಕ್ಷಿಣ ಮೂರ್ತಿ, ನಾ. ವಿಜಯಶಂಕರ್ ಉಪಸ್ಥಿತರಿದ್ದರು.**

ಕರ್ನಾಟಕ ಸೈಬರ್ ಕಾನೂನು ಪ್ರಜ್ಞಾಂದೋಳನ ಕಾರ್ಯಕ್ರಮದಲ್ಲಿ ಜನಹಿತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ರಾಜ್ಯದ ತಾಂತ್ರಿಕ ಕಾಲೇಜುಗಳಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ಕಡಿಮೆಗೊಳಿಸುವ ಸಲುವಾಗಿ ಸೈಬರ್ ಕಾನೂನು ಅರಿವು ಮತ್ತು ಪಾಲನೆ ಬಗ್ಗೆ ಉಪನ್ಯಾಸಗಳನ್ನು ನಡೆಸುವುದು, ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಸೈಬರ್ ನೈತಿಕ ಪ್ರಜ್ಞೆ ಮೂಡಿಸಿ ಜವಾಬ್ದಾರಿಯುತ ಯುವ ಸೈಬರ್ ಪ್ರಜೆಗಳನ್ನಾಗಿ ಬೆಳೆಸುವುದು, ರಾಜ್ಯವನ್ನು ಸೈಬರ್ ಕಾನೂನು ಮತ್ತು ಮಾಹಿತಿ ರಕ್ಷಣೆ ವಿಷಯ ದಲ್ಲಿ ದೇಶದಲ್ಲೇ ಮಾದರಿ ರಾಜ್ಯವನ್ನಾಗಿಸುವ ಪ್ರಯತ್ನ ಮಾಡುವುದಾಗಿ ವಿಚಾರ ಸಂಕಿರಣದಲ್ಲಿ ತಿಳಿಸಲಾಯಿತು.

ಸಮಾರಂಭದಲ್ಲಿ ಕೆಎಲ್ಇಎಸ್ ಕಾನೂನು ಕಾಲೇಜಿನ ಪ್ರಿನ್ಸಿಪಾಲ್ ಜೆ.ಎಂ. ಮಲ್ಲಿಕಾರ್ಜುನ, ಕಾನೂನು ಸಚಿವ ಎಸ್. ಸುರೇಶ್‌ಕುಮಾರ್, ಕಿಲ್ಪಾರ್ ನಿರ್ದೇಶಕ ದಕ್ಷಿಣ ಮೂರ್ತಿ, ಡಿಎಸ್‌ಎಫ್ಐ ಅಧ್ಯಕ್ಷ ನಾ. ವಿಜಯಶಂಕರ್ ಉಪಸ್ಥಿತರಿದ್ದರು.